# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ :** ರಾಜ್ಯದ 13 ಜಿಲ್ಲೆಗಳ 37 ವಕ್ಫ್ ಸಂಸ್ಥೆಗಳ ದುರಸ್ಥಿ ಮತ್ತು ಜೀರ್ಣೋದ್ಧಾರಕ್ಕಾಗಿ ಅನುದಾನ ಬಿಡುಗಡೆ ಮಾಡುವ ಬಗ್ಗೆ.

**ಓದಲಾಗಿದೆ :** 1) ಸರ್ಕಾರಿ ಆದೇಶ ಸಂಖ್ಯೆ: **RD 139 CWP 1977** ದಿನಾಂಕ: 23-08-1979 & **MWD 147 WES 2019**, ದಿನಾಂಕ: 05-02-2020.

2) ಸರ್ಕಾರಿ ಆದೇಶ ಸಂಖ್ಯೆ: **MWD 33 WES 2022**, ದಿನಾಂಕ: 11.04.2022 & 28.06.2022.

3) ಸರ್ಕಾರಿ ಆದೇಶ ಸಂಖ್ಯೆ: **MWD 12 WGA 2022**, ದಿನಾಂಕ:-03.10.2022.

4) ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಕರ್ನಾಟಕ ರಾಜ್ಯ ವಕ್ಫ್ ಮಂಡಳಿ ಇವರ ಪತ್ರ ಸಂಖ್ಯೆ: KBW/A6-2/GTS/RECOMM/02/2022-23, ದಿ: 23-09-2022.

**ಪ್ರಸ್ತಾವನೆ:**

ಮೇಲೆ(1)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ರಾಜ್ಯದಲ್ಲಿನ ವಕ್ಫ್ ಸಂಸ್ಥೆಗಳಿಗೆ Grant-in Aid Code ಅನ್ನು ಆಗಸ್ಟ್ 1979 ಹಾಗೂ ಫೆಬ್ರವರಿ 2020 ರಲ್ಲಿ ಜಾರಿಗೊಳಿಸಲಾಗಿದೆ.

ಮೇಲೆ (2)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ವಕ್ಫ್ ಸಂಸ್ಥೆಗಳ ಜೀರ್ಣೋದ್ಧಾರ ಹಾಗೂ ದುರಸ್ಥಿಗಾಗಿ 2022-23ನೇ ಸಾಲಿನ ಲೆಕ್ಕಶೀರ್ಷಿಕೆ: 2225-04-800-0-04(015) ರಡಿಯಲ್ಲಿ ರೂ.1000.00ಲಕ್ಷಗಳ ಅನುದಾನವನ್ನು ವಕ್ಫ್ ಸಂಸ್ಥೆಗಳ ದುರಸ್ಥಿ ಮತ್ತು ಜೀರ್ಣೋದ್ಧಾರಕ್ಕಾಗಿ ಹಂಚಿಕೆ ಮಾಡಲಾಗಿರುತ್ತದೆ. ಇದರಲ್ಲಿ ಮೊದಲನೇ ಹಾಗೂ ಎರಡನೇ ತ್ರೈಮಾಸಿಕ ಕಂತಾಗಿ ರೂ.500.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ.

ಮೇಲೆ (3)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ 2016-17 ಮತ್ತು 2017-18ನೇ ಸಾಲಿನಲ್ಲಿ ರಾಜ್ಯದಲ್ಲಿನ ವಕ್ಫ್ ಆಸ್ತಿಗಳ ದುರಸ್ತಿ ಮತ್ತು ಜೀರ್ಣೋದ್ಧಾರಕ್ಕಾಗಿ ಸರ್ಕಾರದ ಆದೇಶ ಸಂಖ್ಯೆ: MWD 25 WGA 2017, ದಿನಾಂಕ: 10-04-2017, MWD 50 WGA 2017, ದಿನಾಂಕ: 13-12-2017 ಮತ್ತು MWD 15 WGA 2018, ದಿನಾಂಕ:12-03-2018 ರಲ್ಲಿ ಮಂಜೂರು ಮಾಡಲಾದ ಸಹಾಯಾನುದಾನಗಳ ಪೈಕಿ ಕ್ರಮವಾಗಿ ರೂ.85.50/- ಲಕ್ಷ, ರೂ.211.00/- ಲಕ್ಷ ಮತ್ತು ರೂ.173.50/- ಲಕ್ಷಗಳಂತೆ ಒಟ್ಟು ರೂ.470.00/- ಲಕ್ಷಗಳ ಅನುದಾನವನ್ನು ರದ್ದುಗೊಳಿಸಿ ಹಿಂಪಡೆಯಲಾಗಿದೆ.

ಮೇಲೆ (4)ರಲ್ಲಿ ಓದಲಾದ ಪತ್ರದಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಕರ್ನಾಟಕ ರಾಜ್ಯ ವಕ್ಫ್ ಮಂಡಳಿ ಇವರು ರಾಜ್ಯದ 13 ಜಿಲ್ಲೆಗಳ 37 ವಕ್ಫ್ ಸಂಸ್ಥೆಗಳ ದುರಸ್ಥಿ ಹಾಗೂ ಜೀರ್ಣೋದ್ಧಾರಕ್ಕಾಗಿ ಅನುದಾನವನ್ನು ಬಿಡುಗಡೆ ಮಾಡುವ ಕುರಿತು ಪ್ರಸ್ತಾವನೆಗಳು ಸ್ವೀಕೃತವಾಗಿದ್ದು, ಸದರಿ ವಕ್ಫ್ ಸಂಸ್ಥೆಗಳಿಗೆ ಸಹಾಯಾನುದಾನ ಬಿಡುಗಡೆಗೊಳಿಸಬಹುದೆಂದು ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಕರ್ನಾಟಕ ರಾಜ್ಯ ವಕ್ಫ್ ಮಂಡಳಿ ಇವರು ಶಿಫಾರಸ್ಸು ಮಾಡಿರುತ್ತಾರೆ. ಅದರಂತೆ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: MWD 12 WGA 2022, ಬೆಂಗಳೂರು, ದಿನಾಂಕ: 06.10.2022**

ಮೇಲೆ ವಿವರಿಸಿರುವಂತೆ MWD 12 WGA 2022, ಬೆಂಗಳೂರು, ದಿನಾಂಕ:- 03.10.2022 ರಲ್ಲಿ 2016-17 ಮತ್ತು 2017-18ನೇ ಸಾಲಿನಲ್ಲಿ ರಾಜ್ಯದಲ್ಲಿನ ವಕ್ಫ್ ಆಸ್ತಿಗಳ ದುರಸ್ತಿ ಮತ್ತು ಜೀರ್ಣೋದ್ಧಾರಕ್ಕಾಗಿ ಒಟ್ಟು ರೂ.470.00/- ಲಕ್ಷಗಳ ಅನುದಾನವನ್ನು ರದ್ದುಗೊಳಿಸಿ ಹಿಂಪಡೆಯಲಾಗಿರುವ ಹಿನ್ನೆಲೆಯಲ್ಲಿ, ಈ ಅನುದಾನದ ಪೈಕಿ ರಾಜ್ಯದ 13 ಜಿಲ್ಲೆಗಳ 37 ವಕ್ಫ್ ಸಂಸ್ಥೆಗಳ ದುರಸ್ಥಿ ಮತ್ತು ಜೀರ್ಣೋದ್ಧಾರಕ್ಕಾಗಿ

...2

I.No. 544
07 OCT 2022

ರೂ.357.00 ಲಕ್ಷಗಳ ಅನುದಾನವನ್ನು ಮಂಜೂರು ಮಾಡಿ ಅನುಬಂಧದಲ್ಲಿನ ಸಂಸ್ಥೆಗಳ ಎದುರಿಗೆ ಸೂಚಿಸಲಾಗಿರುವ ಪ್ರತ್ಯೇಕ ಮೊತ್ತವನ್ನು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಮಂಜೂರು ಮಾಡಿ ಆದೇಶಿಸಿದೆ.

**ಷರತ್ತುಗಳು:**

1. ಈ ವೆಚ್ಚವನ್ನು MWD 12 WGA 2022, ಬೆಂಗಳೂರು, ದಿನಾಂಕ:-03.10.2022ರಲ್ಲಿ ಹಿಂಪಡೆಯಲಾಗಿರುವ ಅನುದಾನದಿಂದಲೇ ಭರಿಸತಕ್ಕದ್ದು.
2. ಮೇಲೆ ಓದಲಾದ (1)ರ ಆದೇಶದಂತೆ ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯು Grant-in-Aid ನಲ್ಲಿರುವ ಸೂಚನೆಗಳನ್ನು ವಕ್ಫ್ ಸಂಸ್ಥೆಗಳಿಗೆ ಹಣ ಬಿಡುಗಡೆಗೊಳಿಸುವ ಮುನ್ನ ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.
3. ರೂ.5.00 ಲಕ್ಷಕ್ಕಿಂತ ಹೆಚ್ಚು ಅನುದಾನ ಮಂಜೂರು ಮಾಡಲಾಗಿರುವ ವಕ್ಫ್ ಸಂಸ್ಥೆಗಳಿಗೆ ಮೊದಲನೇ ಕಂತಿನ ರೂ.5.00 ಲಕ್ಷಗಳನ್ನು ಪ್ರಥಮ ಕಂತಿನಲ್ಲಿ ಬಿಡುಗಡೆ ಮಾಡಿ ಇನ್ನುಳಿದ ಮೊತ್ತವನ್ನು ಎರಡನೇ ಕಂತಿನಲ್ಲಿ ಬಿಡುಗಡೆ ಮಾಡತಕ್ಕದ್ದು. 2ನೇ ಕಂತಿನ ಅನುದಾನ ಬಿಡುಗಡೆ ಮಾಡುವ ಮೊದಲು ಕಾಮಗಾರಿಯ ಪ್ರಗತಿಯನ್ನು ಕಡ್ಡಾಯವಾಗಿ ಪರಿಶೀಲಿಸಿ ಪ್ರಗತಿಯಾದಲ್ಲಿ ಹಣ ಬಳಕೆ ಪ್ರಮಾಣ ಪತ್ರ ಪಡೆದ ನಂತರ ಮಾತ್ರ ಅನುದಾನ ಬಿಡುಗಡೆ ಮಾಡತಕ್ಕದ್ದು.
4. ರೂ.5.00ಲಕ್ಷಕ್ಕಿಂತ ಕಡಿಮೆ ಅನುದಾನ ಮಂಜೂರಾಗಿರುವ ವಕ್ಫ್ ಸಂಸ್ಥೆಗಳಿಗೆ ಅನುದಾನವನ್ನು ಒಂದೇ ಕಂತಿನಲ್ಲಿ ಬಿಡುಗಡೆ ಮಾಡತಕ್ಕದ್ದು.
5. ಸದರಿ ಅನುದಾನವನ್ನು ಯಾವ ಉದ್ದೇಶಕ್ಕಾಗಿ ಹಣ ಬಿಡುಗಡೆಗೊಳಿಸಲಾಗಿದೆಯೋ ಆ ಉದ್ದೇಶಕ್ಕಾಗಿ ಬಳಕೆಯಾಗಿರುವ ಬಗ್ಗೆ ಹಣ ಬಳಕೆ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಸಂಸ್ಥೆಗಳು ಕಡ್ಡಾಯವಾಗಿ ಕಳುಹಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 01 ಟಿಎಫ್‌ಪಿ 2022, ದಿನಾಂಕ:04.04.2022 ರಲ್ಲಿ ಇಲಾಖಾ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಮುಕ್ತಾರ್ ಪಾಷ ಹೆಚ್.ಜಿ) 6/10/2022
ಸರ್ಕಾರದ ಅಧೀನ ಕಾರ್ಯದರ್ಶಿ
ಅಲ್ಪಸಂಖ್ಯಾತರ ಕಲ್ಯಾಣ ಹಜ್
ಮತ್ತು ವಕ್ಫ್ ಇಲಾಖೆ.

ಗೆ:

1) ಮಹಾಲೇಖಪಾಲರು (ಅ ಮತ್ತು ಇ), ಕರ್ನಾಟಕ, ಬೆಂಗಳೂರು
2) ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ (ವೆಚ್ಚ) ವಿಧಾನ ಸೌಧ, ಬೆಂಗಳೂರು.
3) ಮುಖ್ಯಕಾರ್ಯನಿರ್ವಾಹಣಾಧಿಕಾರಿಗಳು, ಕರ್ನಾಟಕ ರಾಜ್ಯ ವಕ್ಫ್ ಮಂಡಳಿ, ಕನ್ನಿಂಗ್ ಹ್ಯಾಂ ರಸ್ತೆ, ಬೆಂಗಳೂರು.
4) ಮಾನ್ಯ ಮುಜರಾಯಿ, ಹಜ್ ಮತ್ತು ವಕ್ಫ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸ ಸೌಧ, ಬೆಂಗಳೂರು.
5) ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಅಲ್ಪಸಂಖ್ಯಾತರ ಕಲ್ಯಾಣ ಹಜ್ ಮತ್ತು ವಕ್ಫ್ ಇಲಾಖೆ, ವಿಕಾಸ ಸೌಧ, ಬೆಂಗಳೂರು.
6) ಅಧ್ಯಕ್ಷರು/ವಕ್ಫ್ ಅಧಿಕಾರಿಗಳು, ಜಿಲ್ಲಾ ವಕ್ಫ್ ಸಲಹಾ ಸಮಿತಿ, ಬೆಳಗಾವಿ, ಉಡುಪಿ, ಶಿವಮೊಗ್ಗ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳು.
7) ಸಮನ್ವಯ ಅಧಿಕಾರಿ, ಅಲ್ಪಸಂಖ್ಯಾತರ ಸಹಾಯವಾಣಿ ಕೇಂದ್ರ,(24x7) ವಸಂತನಗರ ಬೆಂಗಳೂರು.
8) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

**ಸರ್ಕಾರದ ಆದೇಶ ಸಂಖ್ಯೆ: MWD 12 WGA 2022,**

**ಬೆಂಗಳೂರು, ದಿನಾಂಕ: 06.10.2022 ಕ್ಕೆ ಅನುಬಂಧ**

(ರೂ.ಲಕ್ಷಗಳಲ್ಲಿ)

| | | | |
|---|---|---|---|
| | **3.ಕಲಬುರಗಿ ಜಿಲ್ಲೆ** | | |
| 15 | ಸೈಯ್ಯದ ಪೀರ ದರ್ಗಾ ಸೈದಾಪುರ ಯಡ್ರಾಮಿ ತಾಲ್ಲೂಕು, ಕಲಬುರಗಿ ಜಿಲ್ಲೆ. | (ದುರಸ್ಥಿ ಮತ್ತು ಜೀರ್ಣೋದ್ಧಾರ) | 10.00 |
| 16 | ಆಶುರಖಾನಾ ಕರ್ಕಿಹಳ್ಳಿ, ಯಡ್ರಾಮಿ ತಾಲ್ಲೂಕು, ಕಲಬುರಗಿ ಜಿಲ್ಲೆ. | (ದುರಸ್ಥಿ ಮತ್ತು ಜೀರ್ಣೋದ್ಧಾರ) | 10.00 |
| 17 | ಮುಸ್ಲಿಂ ಕಬರಸ್ತಾನ, ಬಡಿ ದರ್ಗಾ, ಚಿಂಚೋಳಿ ತಾ, ಕಲಬುರಗಿ ಜಿಲ್ಲೆ. | (ದುರಸ್ಥಿ ಮತ್ತು ಜೀರ್ಣೋದ್ಧಾರ) | 10.00 |
| | **4.ವಿಜಯಪುರ ಜಿಲ್ಲೆ** | | |
| 18 | ಅಲ್‌ಹಾಶ್ಮಿ ಮಜೀದ್ & ಮದರಸಾ, ಐನಾಪುರ, ವಿಜಯಪುರ ಜಿಲ್ಲೆ | (ದುರಸ್ಥಿ ಮತ್ತು ಜೀರ್ಣೋದ್ಧಾರ) | 10.00 |
| 19 | ಮಜ್ಜಿದ್ & ಖಬರಸ್ತಾನ, ಬರಗುಡಗಿ ಗ್ರಾಮ, ಇಂಡಿ ತಾ, ವಿಜಯಪುರ ಜಿಲ್ಲೆ | (ದುರಸ್ಥಿ ಮತ್ತು ಜೀರ್ಣೋದ್ಧಾರ) | 10.00 |
| | **5.ಬಾಗಲಕೋಟೆ ಜಿಲ್ಲೆ** | | |
| 20 | ಮಸ್ಜಿದ್-ಎ-ಮುನವ್ವರಾ ಜಮಾತ್, ನವನಗರ್ ಇಲಕಲ್ ತಾಲ್ಲೂಕು, ಬಾಗಲಕೋಟೆ ಜಿಲ್ಲೆ. | (ದುರಸ್ಥಿ ಮತ್ತು ಜೀರ್ಣೋದ್ಧಾರ) | 10.00 |
| | **6.ಬೀದರ್ ಜಿಲ್ಲೆ** | | |
| 21 | ಮಸ್ಜಿದ್-ಎ-ಮೊಹಮ್ಮದಿಯಾ(ಸುನ್ನಿ), ಅಪ್ಟೂರ್ ಗ್ರಾಮ, ಬೀದರ್ ತಾಲ್ಲೂಕು ಬೀದರ್ ಜಿಲ್ಲೆ. | (ದುರಸ್ಥಿ ಮತ್ತು ಜೀರ್ಣೋದ್ಧಾರ) | 04.00 |
| 22 | ದರ್ಗಾ ಹಜರತ್ ಬಿಸ್ಮಿಲ್ಲಾ ಬಾಬಾ ಅಲಿಯಾಸ್ ಮಿಸ್ತರಿ ಬಾಬಾ (ಸುನ್ನಿ), ಅಪ್ಟೂರ್ ಗ್ರಾಮ, ಬೀದರ್ ತಾಲ್ಲೂಕು ಬೀದರ್ ಜಿಲ್ಲೆ. | (ದುರಸ್ಥಿ ಮತ್ತು ಜೀರ್ಣೋದ್ಧಾರ) | 04.00 |
| 23 | ಸಾಬಿರ್ ಪಿಯಾ ಮತ್ತು ಲಾಲ್ ಪಾ ಕಲ್ಲೂರ್ ಷರೀಫ್ ಛಿಲ್ಲಾ (ಸುನ್ನಿ), ಖಾನಾಪುರ್ ಗ್ರಾಮ, ಭಾಲ್ಕಿ ತಾಲ್ಲೂಕು ಬೀದರ್ ಜಿಲ್ಲೆ. | (ದುರಸ್ಥಿ ಮತ್ತು ಜೀರ್ಣೋದ್ಧಾರ) | 05.00 |
| | **7.ಬೆಂಗಳೂರು ಗ್ರಾಮಾಂತರ ಜಿಲ್ಲೆ** | | |
| 24 | ಜಾಮಿಯಾ ಮಸ್ಜಿದ್ ನೆಲಮಂಗಲ ಟೌನ್ ಮತ್ತು ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ. | (ದುರಸ್ಥಿ ಮತ್ತು ಜೀರ್ಣೋದ್ಧಾರ) | 10.00 |
| | **8. ಚಿಕ್ಕಮಗಳೂರು ಜಿಲ್ಲೆ** | | |
| 25 | ಮಸ್ಜಿದ್-ಎ-ಇಲಾಹಿ, ದಂತರಮಕ್ಕಿ ಗ್ರಾಮ, ಚಿಕ್ಕಮಗಳೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ. | (ದುರಸ್ಥಿ ಮತ್ತು ಜೀರ್ಣೋದ್ಧಾರ) | 10.00 |
| | **9. ರಾಯಚೂರು ಜಿಲ್ಲೆ** | | |
| 26 | ದರ್ಗಾ ಖುತ್ಬ್-ಎ-ರಾಯಚೂರು, ಹಜರತ್ ಸೈಯದ್ ಶಮ್ಸ್ ಆಲಂ ಹುಸೇನಿ(ಸುನ್ನಿ) ಮತ್ತು ಮಸ್ಜಿದ್, ರಾಯಚೂರು ತಾಲ್ಲೂಕು, ರಾಯಚೂರು ಜಿಲ್ಲೆ. | (ದುರಸ್ಥಿ ಮತ್ತು ಜೀರ್ಣೋದ್ಧಾರ) | 10.00 |
| 27 | ಈದ್ಗಾ, (ಸುನ್ನಿ), ಕೊಪ್ಪಲ್ ಗ್ರಾಮ, ಮಾನ್ವಿ ತಾಲ್ಲೂಕು, ರಾಯಚೂರು ಜಿಲ್ಲೆ. | (ದುರಸ್ಥಿ ಮತ್ತು ಜೀರ್ಣೋದ್ಧಾರ) | 10.00 |
| 28 | ಮಕ್ಕಾ ಮಸ್ಜಿದ್ ಮತ್ತು ಅರಬ್ಬಿ ಶಾಲೆ (ಸುನ್ನಿ), ಕೊಪ್ಪಲ್ ಗ್ರಾಮ, ಮಾನ್ವಿ ತಾಲ್ಲೂಕು, ರಾಯಚೂರು ಜಿಲ್ಲೆ. | (ದುರಸ್ಥಿ ಮತ್ತು ಜೀರ್ಣೋದ್ಧಾರ) | 10.00 |

## ಸರ್ಕಾರದ ಆದೇಶ ಸಂಖ್ಯೆ: MWD 12 WGA 2022,

ಬೆಂಗಳೂರು, ದಿನಾಂಕ: 06.10.2022 ಕ್ಕೆ ಅನುಬಂಧ

(ರೂ.ಲಕ್ಷಗಳಲ್ಲಿ)

| | | | |
|---|---|---|---|
| | **10.ಉಡುಪಿ ಜಿಲ್ಲೆ** | | |
| 29 | ಮೊಹಿಯುದ್ದಿನ್ ಜುಮ್ಮಾ ಮಸ್ಜಿದ್, ಕೋಡಿ ಕನ್ಯಾಣ, ಉಡುಪಿ ತಾಲ್ಲೂಕು, ಉಡುಪಿ ಜಿಲ್ಲೆ. | (ದುರಸ್ಥಿ ಮತ್ತು ಜೀರ್ಣೋದ್ಧಾರ) | 10.00 |
| | **11. ಕೊಡಗು ಜಿಲ್ಲೆ** | | |
| 30 | ಮರ್ಕಜುಲ್ ಹಿದಾಯ ಎಜ್ಯುಕೇಷನ್ ಸೆಂಟರ್, ಕೊಟ್ಟಮುಡಿ, ಮಡಿಕೇರಿ ತಾಲ್ಲೂಕು, ಕೊಡಗು ಜಿಲ್ಲೆ ಸಂಸ್ಥೆಯ ಲಂಗರ್ ಖಾನ ಮತ್ತು ಯಾತ್ರಾ ನಿವಾಸ ಮುಂದುವರೆದ ಕಾಮಗಾರಿ | (ದುರಸ್ಥಿ ಮತ್ತು ಜೀರ್ಣೋದ್ಧಾರ) | 10.00 |
| | **12.ದಾವಣಗೆರೆ ಜಿಲ್ಲೆ** | | |
| 31 | ಅಲ್ ಜಾಮಿಯಾ ನೂರ್ ಎ ಇಲಾಹಿ ಮದರಸತ್ ಉಲ್ ಬನಾತ್ ಗೌಸ್ ನಗರ, ಟಿಪ್ಪು ನಗರ, ಮಲೆಬೆನ್ನೂರು, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ. | (ದುರಸ್ಥಿ ಮತ್ತು ಜೀರ್ಣೋದ್ಧಾರ) | 10.00 |
| 32 | ಹರ್ಳಾಪುರ ಮಸ್ಜಿದ್ (ಮಸ್ಜಿದ್-ಎ-ಮುಬಾರಕ್) ಹರ್ಳಾಪುರ, ಹರಿಹರ್ ಪಟ್ಟಣ ಮತ್ತು ತಾಲ್ಲೂಕು, ದಾವಣಗೆರೆ ಜಿಲ್ಲೆ. | (ದುರಸ್ಥಿ ಮತ್ತು ಜೀರ್ಣೋದ್ಧಾರ) | 10.00 |
| 33 | ಮಸ್ಜಿದ್-ಎ-ಮದನಿ(ನಬವಿ), ಅಹ್ಲೆ ಸುನ್ನತ್ ಉಲ್ ಜಮಾತ್, ಜಾಲಿನಗರ್ ದಾವಣಗೆರೆ ಜಿಲ್ಲೆ. | (ದುರಸ್ಥಿ ಮತ್ತು ಜೀರ್ಣೋದ್ಧಾರ) | 10.00 |
| | **13. ಬೆಳಗಾವಿ ಜಿಲ್ಲೆ** | | |
| 34 | ಬಂಗಾಲಿ ಪೀರ ದರ್ಗಾ, ಕಾರದಗಾ ಗ್ರಾಮ, ನಿಪ್ಪಾಣಿ ತಾ, ಬೆಳಗಾವಿ ಜಿಲ್ಲೆ | (ದುರಸ್ಥಿ ಮತ್ತು ಜೀರ್ಣೋದ್ಧಾರ) | 25.00 |
| 35 | ಹಜರತ ಗೈಬಿ ಸಾಹೇಬ್ ದರ್ಗಾ ಟ್ರಸ್ಟ್, ಖಡಕ್‌ಲಾಟ್, ಚಿಕ್ಕೋಡಿ ತಾ, ಬೆಳಗಾವಿ ಜಿಲ್ಲೆ | (ದುರಸ್ಥಿ ಮತ್ತು ಜೀರ್ಣೋದ್ಧಾರ) | 25.00 |
| 36 | ಅಂಜುಮನ್ ಇಸ್ಲಾಂ, ಶಿರಗುಪ್ಪಿ, ಅಥಣಿ ತಾ, ಬೆಳಗಾವಿ ಜಿಲ್ಲೆ | (ದುರಸ್ಥಿ ಮತ್ತು ಜೀರ್ಣೋದ್ಧಾರ) | 10.00 |
| 37 | ನಯಾಮೊಹಲ್ಲಾ ಮಸೀದಿ, ಕಂಬಾಗಲ್ಲಿ, ಬೈಲಹೊಂಗಲ ಪಟ್ಟಣ, ಬೈಲಹೊಂಗಲ ತಾ, ಬೆಳಗಾವಿ ಜಿಲ್ಲೆ | (ದುರಸ್ಥಿ ಮತ್ತು ಜೀರ್ಣೋದ್ಧಾರ) | 20.00 |
| | ಒಟ್ಟು | | 357.00 |

**(ಮೂರು ಕೋಟಿ ಐವತ್ತೇಳು ಲಕ್ಷ ರೂಪಾಯಿಗಳು ಮಾತ್ರ)**

Mukhtar Pasha. H.G.
6/10/2022

**(ಮುಕ್ತಾರ್ ಪಾಷ ಹೆಚ್.ಜಿ)**
ಸರ್ಕಾರದ ಅಧೀನ ಕಾರ್ಯದರ್ಶಿ
ಅಲ್ಪಸಂಖ್ಯಾತರ ಕಲ್ಯಾಣ, ಹಜ್
ಮತ್ತು ವಕ್ಫ್ ಇಲಾಖೆ